ತನ್ನ ಮಾತಿಗೆ ಸಹಕಾರ ಕೊಡುವಂತೆ ಹುಲಿಮರಿಯು ದೂರ ಹೊರಟದ್ದನ್ನು ಗಮನಿಸಿದ ಕಾಳಿಂಗಜ್ಜ ಹೆದರುಹೆಜ್ಜೆ ಹಾಕುತ್ತ ನಿಧಾನವಾಗಿ ಗುಡಿಸಲಿನ ಹೊರಗೆ ಬಂದು, ಹಿಂದೆ ನೋಡುತ್ತಲೇ, ಮುಂದೆ ಹೋಗಿ, ಅವಸರವಸರವಾಗಿ ದೊಡ್ಡಿಯ ಬಾಗಿಲನ್ನು ತೆರೆದು ಮತ್ತೆ ಗಡಬಡಿಸಿ ಒಳಗೆ ಓಡಿಹೋದ. ಹಾಗೆ ಹೋದವನೇ ಒಳಗಿನಿಂದ ಗುಡಿಸಲಿನ ಬಾಗಿಲನ್ನು ದಬಕ್ಕನೇ ಮುಚ್ಚಿಕೊಂಡ. ಕಾಳಿಂಗಜ್ಜನ ಈ ಹೈಡ್ರಾಮಾ ನೋಡುತ್ತಿದ್ದ ಹುಲಿಮರಿಯು ಐದು ದಿನಗಳ ಹಸಿವಿನಲ್ಲೂ ಒಳಗೊಳಗೇ ನಕ್ಕಿತು. ಕೊಟ್ಟ ಮಾತಿನಂತೆ ದೂರ ಹೋಗಿ ನಿಂತಿದ್ದ ಅದಕ್ಕೆ ಬೆಂಕಿಯಂಥ ಹಸಿವು ಹಾಗೂ ತನ್ನನ್ನು ಅನಾಥನನ್ನಾಗಿ ಮಾಡಿ ಹೋದ ತಂದೆಹುಲಿಯ ನೆನಪಾಗಿ, ದುಃಖ ಒತ್ತರಿಸಿ ಬಂತು. ಹಸಿವು, ಅನಾಥ ಭಾವನೆ ಎಲ್ಲವೂ ಒಟ್ಟುಗೂಡಿದ ಅದರ ಕರುಳಿನ ನೋವು ಹಾಡಾಗಿ ತಂತಾನೆ ಹೊರಬರತೊಡಗಿತು.

ಸತ್ಯಮಾತಿಗೆ ಪ್ರಾಣ ಕೊಟ್ಟು
ನಿತ್ಯವಂತನು ನೀನು ಆದೆ,
ಹಸಿದ ಕಂದನ ಮರೆತು ಸತ್ತು,
ನನ್ನ ತಬ್ಬಲಿ ಮಾಡಿದೆ.

ಸಾಯುವಾಗ ನೆನಪು ಬರದೆ?
ಅಮ್ಮ ಸತ್ತುದು ಮರೆತು ಹೋಯ್ತೆ?
ಜೀವವಿದ್ದೂ ಸಾಯುತಿರುವ
ಕಂದನಳುವು ಕೇಳದೆ?

ಪುಣ್ಯವೆಂಬುದು ಗೋವ ಸ್ವತ್ತೆ?
ಪಾಪ ಮಾತ್ರ ನಮ್ಮ ಸುತ್ತೆ?
ಜೀವವೆಲ್ಲವ ಕಾವ ದೇವಗೆ
ಇದುವೆ ನ್ಯಾಯವು–ನೀತಿಯೆ?

'ಏನು ಹಾಡಿದರೇನು, ಸತ್ತ ಅಪ್ಪ ಹಾಗೂ ಅಪ್ಪನಿಗೂ ಮೊದಲೇ ಸತ್ತ ತಾಯಿ ಹುಲಿ ಬದುಕಿ ಬರಲು ಸಾಧ್ಯವೆ?' ಎಂದುಕೊಳ್ಳುತ್ತ ಹುಲಿಮರಿ ದೊಡ್ಡಿಯ ಬಾಗಿಲತ್ತ ಹೊರಳಿ ನೋಡುತ್ತದೆ; ಅಷ್ಟರಲ್ಲೇ ಅದು ತೆರೆದಿದೆ! ಇನ್ನು ತಡ ಮಾಡೋದು ಬೇಡವೆಂದು ನಿಧಾನವಾಗಿ ಬಾಗಿಲತ್ತ ಬರುತ್ತದೆ. ಹುಲಿಯ ವಾಸನೆಯನ್ನು ತಮ್ಮ ಮೂಗಿನ ಹೊರಳೆಗಳಿಂದ ಗ್ರಹಿಸಿದ ಆಕಳುಗಳು ಮತ್ತು ಕರುಗಳು ತಮಗೆ ಏನೋ ಪ್ರಾಣಾಪಾಯ ಬಂದಿದೆಯೆಂದು ಹೆದರಿ ಒಳಗಿನಿಂದ ಅಂಬಾ! ಎಂದು ಅರಚಾಡತೊಡಗುತ್ತವೆ. ಜೀವಭಯದಿಂದ ಒಳಗೆ ಓಡಿಹೋಗಿ ಬಾಗಿಲು ಮುಚ್ಚಿಕೊಂಡಿದ್ದ ಕಾಳಿಂಗಜ್ಜನಿಗೆ ತನ್ನ ಹಸುಗಳಿಗೆ ಏನಾಗುತ್ತದೆಯೋ ಎಂಬ ತಳಮಳ. ಯಾವುದಕ್ಕೂ ಇರಲಿ ಎಂದು ಕಂಬದ ಗೂಟಕ್ಕೆ ಜೋತುಹಾಕಿದ್ದ ಜೋಡು ನಳಿಕೆಯ ಬಂದೂಕನ್ನು ಕೈಗೆತ್ತಿಕೊಂಡು, ದೊಡ್ಡಿಯ ತಟ್ಟಿಯಲ್ಲಿ ಒಂದು ತೂತನ್ನು ಮಾಡಿ, ಅದರಲ್ಲಿ ಬಂದೂಕಿನ ನಳಿಕೆ ತೂರಿಸಿ, ಅದೇ ತೂತಿನ ಮೂಲಕ ನೋಡುತ್ತ ನಿಂತ.

ಪ್ರಾಣಭಯದಿಂದ ಗೋಗರೆಯುತ್ತಿದ್ದ ದೊಡ್ಡಿಯ ಆಕಳುಗಳನ್ನು ನೋಡಿದ ಹುಲಿಮರಿಯು ತನ್ನ